# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂಃ**258/2017**

## ಚಾಸಾ-2/ಪ್ರಾಸಾ-2

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕಃ08.04.2026**

| | | |
|---|---|---|
| ಹೆಸರು | : | ಬಸವರಾಜ್ ತಂದೆ ಓಬಪ್ಪ |
| ವಯಸ್ಸು | : | **45** ವರ್ಷ |
| ಉದ್ಯೋಗ | : | ವ್ಯವಸಾಯ |
| ವಿಳಾಸ | : | ಮಲೇಮಾಚಿಕೆರೆ ಗ್ರಾಮ , ಜಗಳೂರು ತಾಲ್ಲೂಕು . |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಚಾಸಾ-**1** ನನಗೆ ಗೋತ್ತು . ಅವರು ನಮ್ಮ ಸಂಬಂಧಿಕರು . ಸಾಕ್ಷಿಗೆ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯು ಕೃತ್ಯ ನಡೆದ ಸ್ಥಳ ಪಂಚನಾಮೆ ಆಗಿದ್ದು ಅದನ್ನು ನಿಪಿ 11 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 11 (ಎ) ಎಂದು ಗುರುತಿಸಲಾಯಿತು. ಸದರಿ ನಿಪಿ 11 ದಾಖಲೆಗೆ ಸಹಿಯನ್ನು ನಮ್ಮ ಊರಿನ ಗೌಡರ ಶಿವಣ್ಣ ಅವರ ತೋಟದಲ್ಲಿ ಪೋಲಿಸರು ಪಂಚನಾಮೆ ಜರುಗಿಸುವ ಸಮಯದಲ್ಲಿ ಮಾಡಿರುತ್ತೇನೆ . ನಿಪಿ 11 ದಾಖಲೆಗೆ ಯಾವಾಗ ಸಹಿ ಮಾಡಿರುತ್ತೇನೆ ಎಂದು ನನಗೆ ಗೋತ್ತಿರುವುದಿಲ್ಲ . ನನ್ನ ಜೋತೆ ಯಾರು ಸಹಿ ಮಾಡಿರುತ್ತಾರೆ ಗೋತ್ತಿರುವುದಿಲ್ಲ . ಚಾಸಾ-3 ರವರು ನಮ್ಮ ಊರಿನವರು ಇರುತ್ತಾರೆ . ಅವರು ಈಗ ಮರಣಹೊಂದಿರುತ್ತಾರೆ . ಪೋಲಿಸರು ಸಹಿ ಮಾಡು ಎಂದ ಕಾರಣಕ್ಕೆ ನಾನು ಸಹಿ ಮಾಡಿರುತ್ತೇನೆ . ಯಾವ ವಿಚಾರವಾಗಿ ನನಗೆ ಗೋತ್ತಿರುವುದಿಲ್ಲ .

(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಸೂಕ್ತ ಕಾರಣಗಳನ್ನು ನೀಡಿದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು).

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರಿಂದ:-

ದಿ: 30.06.2016 ರಲ್ಲಿ ನಿಪಿ 11 ದಾಖಲೆಗೆ ನಮ್ಮ ಊರಿನ ಬಸವೇಶ್ವರ ದೇವಸ್ಥಾನದ ಹತ್ತಿರ ಮತ್ತು ನಮ್ಮ ಊರಿನ ಶಿವ ಎಂಬುವವರ ತೋಟದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಚಾಸಾ-18 ರವರು ಸಹ ಹಾಜರು ಇರುತ್ತಾರೆ ಎಂದರೆ ಸರಿಯಲ್ಲ. ಚಸಾ-18 ರವರು ದೇವಸ್ಥಾನದಲ್ಲಿ ಕಳ್ಳತನವಾದ ಬಗ್ಗೆ ತೋರಿಸುತ್ತಾರೆ ಎಂದರೆ ಸರಿಯಲ್ಲ. ದೇವಸ್ಥಾನದ ಪಂಚನಾಮೆಯ ನಂತರ ಪೋಲೀಸರು ಶಿವಣ್ಣ ಗೌಡರ ತೋಟದ ಬಳಿ ನಮ್ಮನ್ನು ಕರೆದುಕೊಂಡು ಹೋಗಿ ನಿಪಿ 11 ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ. ದೇವಸ್ಥಾನದಲ್ಲಿ ಕಳ್ಳತನವಾದ ಸಂಬಂದ ದೇವಸ್ಥಾನದ ಹುಂಡಿ ಸಹ ಸದರಿ ಪಂಚನಾಮೆ ಕಾಲಕ್ಕೆ ತೋಟದಲ್ಲಿ ಇರುತ್ತದೆ ಎಂದರೆ ನನಗೆ ಗೋತ್ತಿಲ್ಲ . ಪೋಲಿಸರು ಪರಿಶೀಲೀಸಿದಾಗ ಸದರಿ ಹುಂಡಿಯು ಖಾಲಿ ಇರುತ್ತದೆ ಎಂದರೆ ಸರಿ. ಸದರಿ ಹುಂಡಿಯನ್ನು ಪೋಲಿಸರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆ ಜರುಗಿಸಿ ದೇವಸ್ದಾನದ ವಶಕ್ಕೆ ನೀಡುತ್ತಾರೆ ಎಂದರೆ ಸರಿಯಲ್ಲ. ಪೋಲಿಸರು ನಿಪಿ 11 ಪಂಚನಾಮೆ ಜರುಗಿಸಿದಾಗ 3 ಪೋಟೋಗಳನ್ನು ತಗೆಯುತ್ತಾರೆ ಎಂದರೆ ಸರಿ. ಸಾಕ್ಷಿಗೆ ಕಡತದಲ್ಲಿರುವ 3 ಪೋಟೋಗಳನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ತಾನು ಇದ್ದ ಬಗ್ಗೆ ಒಪ್ಪಿಕೊಂಡಿದ್ದು, ಅವುಗಳನ್ನು ಕ್ರಮವಾಗಿ ನಿಪಿ 12 ರಿಂದ 14 ಎಂದು ಗುರುತಿಸಲಾಯಿತು. ನಿಪಿ 12 ರಿಂದ 14 ಪೋಟೋಗಳನ್ನು ದೇವಸ್ಥಾನದ ಹುಂಡಿ ಸಿಕ್ಕಿದ ಸ್ಥಳದಲ್ಲಿ ಪೋಲಿಸರು ಪೋಟೋ ತಗೆಯುತ್ತಾರೆ ಎಂದರೆ ಸರಿಯಲ್ಲ. ಪೋಲಿಸರು ನಿಪಿ 11 ಪೋಟೋ ತಗೆಯುವ ಮುಂಚೆ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಕಳ್ಳತನವಾದ ದೇವಸ್ಥಾನದ ಕೃತ್ಯ ಸ್ಥಳದಲ್ಲಿ ಪಂಚನಾಮೆ ಜರುಗಿಸಿ ಪೋಟೋ ತಗೆಯುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಕಡತದಲ್ಲಿರುವ 1 ಪೋಟೋ ತೋರಿಸಲಾಗಿ ಸಾಕ್ಷಿ ಅದರಲ್ಲಿ ತಾನು ಇದ್ದ ಬಗ್ಗೆ ಒಪ್ಪಿಕೊಂಡಿದ್ದು, ಅವುಗಳನ್ನು ಕ್ರಮವಾಗಿ ನಿಪಿ 15 ಮತ್ತು 16 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರಗಳು ಗೋತ್ತಿದ್ದರು ಸಹ ಆರೋಪಿಗಳು ನಮ್ಮ ಊರಿನವರು ಆದ ಕಾರಣ ಅವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ.

**<u>ಪಾಟೀ ಸವಾಲುಃ-ಆರೋಪಿಗಳ ಪರ E.N. ವಕೀಲರಿಂದಃ</u>**

ನಿಪಿ **12** ರಿಂದ **16** ಫೋಟೋಗಳನ್ನು ಪೋಲಿಸರು ಯಾವ ಉದ್ದೇಶಕ್ಕೆ ತೆಗದಿರುತತ-ರೆ ಎಂದು ನನಗೆ ನಿಖರವಾಗಿ ಗೋತ್ತಿರುವುದಿಲ್ಲ ಎಂದರೆ ಸರಿ. ನನಗೆ ನಿಪಿ **11** ಪಂಚನಾಮೆಯಲ್ಲಿ ಇರುವ ವಿಚಾರ ಗೋತ್ತಿರುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ</u> ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)

**ಓ ಹೇ ಕೇ ಸರಿ ಇದೆ**

**ಸಹಿ/-**

**ಪ್ರ.ದ.ನ್ಯಾ.ದಂ., ಜಗಳೂರು**